ನಮ್ಮ ಮುಂದಿದ್ದ ದಾರಿಯಲ್ಲಿ ತಾಯಿ ಚಿರತೆ ತನ್ನ ಎರಡು ಮರಿಗಳಿಗೆ ಶಿಕಾರಿಯ ರೀತಿ ರಿವಾಜು ಕಲಿಸುತ್ತಿತ್ತು. ಅವು ಚಿಣ್ಣಾಟವಾಡುತ್ತಿದ್ದವು. ತಾಯಿ ಹಾಗೂ ಮತ್ತೊಂದು ಮರಿ ನಮ್ಮನ್ನು ತಕ್ಷಣ ಗಮನಿಸಿದಂತೆ ಕಾಣಲಿಲ್ಲ. ಆದರೆ, ನಮ್ಮ ಕಡೆಗೆ ಮುಖ ಮಾಡಿ ಕೂತಿದ್ದ ಮರಿಯೊಂದು ಮಾತ್ರ ನಮ್ಮ ಇರುವಿಕೆಯನ್ನು ಗಮನಿಸಿ ಬಿಟ್ಟಿತು. ಅದಕ್ಕೂ ಒಮ್ಮೆ ಅಚ್ಚರಿಯಾಗಿ ತಾನೇನು ಮಾಡಬೇಕೆಂದು ತೋಚದೆ ಗೊಂದಲದಲ್ಲಿ ಪಕಪಕ ದಿಟ್ಟಿಸತೊಡಗಿತು. ಭಯವಾದಾಗ ಮನುಷ್ಯನ ತಲೆ ನೆಟ್ಟಗೆ ಕೆಲಸ ಮಾಡುವುದೇ ಇಲ್ಲ. ಆದರೆ, ಚಿರತೆಯ ತಲೆ ನಮ್ಮಂತೆ ಪೆಕರ ಅಲ್ಲವಲ್ಲ! ಅದು ತಕ್ಷಣದಲ್ಲೇ ತನಗೆ ತೋಚಿದ ಏನನ್ನಾದರೂ ಮಾಡೇ ಬಿಡಬಹುದು.

ಹೀಗೆ ಖುಲ್ಲಂಖುಲ್ಲಂ ತೆರೆದ ದಾರಿಯಲ್ಲಿ ಚಿರತೆ, ಹುಲಿ, ಕರಡಿ, ಆನೆ ಸಿಕ್ಕರೆ ಏನು ಗತಿ? ಇವುಗಳ ಪಟ ತೆಗೆಯಲು ಹೋಗಿ ಸಿಕ್ಕಿಬಿದ್ದು ನಾವೇ ಗೋತಾ ಹೊಡೆದರೆ ಆಮೇಲೆ ನಮ್ಮ ಪಟಗಳಿಗೆ ಹೂವಿನ ಹಾರ, ಸಂಬಂಧಿಕರ ಬಾಯಿಗೆ ತಿಥಿ ಊಟ ಬೀಳೋದು ಗ್ಯಾರಂಟಿ ಅನ್ನೋದು ಆವತ್ತು ಗೊತ್ತಾಯಿತು. ಜೀವ ಬಾಯಿಗೆ ಬರುವ ಅನುಭವವೂ ತಾಗಿ ಹೋಯಿತು.

ಈಗಲೇ ಅನಾಮತ್ತಾಗಿ ಹಿಂದಕ್ಕೆ ಓಡಿ ಹೋಗುವುದೋ? ಅಥವಾ ನಿಧಾನ ಮುಂದೆ ನಡೆದು ಇನ್ನಷ್ಟು ಹತ್ತಿರದಿಂದ ಹೋಗಿ ಚಿತ್ರ ತೆಗೆಯುವುದೋ? ಇಲ್ಲವೇ ಅಲುಗಾಡದೆ ನಿಂತು ಸಾಧ್ಯವಾದಷ್ಟು ಫೋಟೊ ಪಟಿಸುವುದೋ? ಯಾವುದು ಸರಿಯಾದ ದಾರಿ ಎಂದು ತೋಚದೆ ಗಲಿಬಿಲಿ ಹೆಚ್ಚಾಯಿತು. ಅವು ನಮ್ಮತ್ತ ಎಗರಿ ಬಂದರೆ ನಾವು ಬಚಾವಾಗುವುದೂ ಕಷ್ಟವಿತ್ತು. ಚಿರತೆ ಅಟ್ಟಿಸಿಕೊಂಡು ಬಂದರೆ ಅದರ ಸಮಕ್ಕೆ ನಾವೆಲ್ಲಿ ಓಡಲು ಸಾಧ್ಯ? ಸುಮ್ಮನೆ ಮೈ ಕೊಟ್ಟು 'ನಿನಗೆಷ್ಟು ಬೇಕೋ ಅಷ್ಟು ಮಾಂಸ ಕಿತ್ಕೊಂಡು ತಿಂದು ಸಾಯಿ' ಎಂದು ಶಪಿಸಬಹುದಷ್ಟೆ.

ಹೀಗೆ ಸಾವಿಗೆ ನೇರಾ ಮುಖಾಮುಖಿಯಾದಾಗ ಮನುಷ್ಯನೊಳಗೆ ಕೆಲವೊಮ್ಮೆ ಭಂಡ ಧೈರ್ಯವೂ ಹುಟ್ಟಿ ಬಿಡಬಹುದೇನೋ? ಆದರೆ, ನನ್ನಷ್ಟೇ ಹೆದರಿ ಹೋಗಿದ್ದ ಅವಿನಾಶ್ 'ಈಗೇನು ಮಾಡೋದು ಸರ್' ಎಂದು ಹಲಬುತ್ತಿದ್ದ. 'ಹೆದರಬೇಡ. ಆಗಿದ್ದಾಗಲಿ, ಅಲ್ಲಾಡದೆ ಸುಮ್ಮನೆ ನಿಂತು ಫೋಟೊ ತೆಗೆಯುತ್ತಾ ಹೋಗು. ನಾವು ಓಟ ಕಿತ್ತರೆ ರಚ್ಚೆಡಿದ ಚಿರತೆ ಅಟ್ಟಿಸಿಕೊಂಡೂ ಬರಬಹುದು. ನಾವು ಸುಮ್ಮನೆ ನಿಂತಿದ್ದರೆ ಅದೇ ಬೆದರಿ ಪರಾರಿಯಾಗಬಹುದು. ಯಾವುದಕ್ಕೂ ಕಂಬಿಕೀಳಲು ರೆಡಿ ಇರು' ಎಂದವನಿಗೆ ಧೈರ್ಯ ಹೇಳಿದೆ. ನಾನೂ ಅವಿನಾಶನಷ್ಟೇ ಹೆದರಿ ಬಾಯ್ಬಾಯಿ ಬಿಡುತ್ತಿದ್ದೆ. ಗಂಟಲು ಒಣಗಿ, ಅಡಗಿ ಕೂತಿದ್ದ ಮೂತ್ರ ವಿಸರ್ಜನೆಯಾಗಲು ಅನುಮತಿ ಕೋರುತ್ತಿತ್ತು. ನಾನೇ ತಕ್ಷಣ ಒಪ್ಪಿಗೆ ಕೊಡಲಿಲ್ಲ. ಇಂಥ ಇಕ್ಕಟ್ಟಿನ ಹೊತ್ತಲ್ಲೂ ಮೂತ್ರ ಕಿತಾಪತಿ ಮಾಡುವುದು ಸರಿಯೇ?

ಸದ್ಯ ನಮ್ಮನ್ನು ಕೊಂಚವೂ ಗಮನಿಸದ ತಾಯಿ ಚಿರತೆ ನಮ್ಮ ಕಡೆ ಬೆನ್ನುಮಾಡಿ ತನ್ನೊಂದು ಮರಿಯೊಂದಿಗೆ ಪಕ್ಕದ ಪೊದೆಯ ಕಡೆಗೆ ಇಳಿಯಿತು. ಕೂತು ನಮ್ಮನ್ನೇ ಕೆಲ ಕ್ಷಣ ಗುರಾಯಿಸಿದ ಚಿರತೆ, ತಾಯಿ ಮತ್ತು ಸಹೋದರ ಹೋದ ದಿಕ್ಕಿನೆಡೆಗೆ ಛಂಗನೆ ನೆಗೆದು ಕಾಡುಪಾಲಾಯಿತು. ಅಲ್ಲೀತನಕ ನಾವಿಬ್ಬರು ಅದರ ಪಟಗಳ ಚಚ್ಚಿಕೊಂಡಿದ್ದೆವು.

ಯಾವಾಗ ಚಿರತೆ ಕಣ್ಮರೆಯಾಯಿತೋ ಹೋದ ಜೀವ ಮರಳಿ ಬಂದಂತಾಯಿತು. ಎದ್ದೆವೋ ಬಿದ್ದೆವೋ ಎನ್ನುತ್ತಾ ಒಂದೇ ಉಸಿರಿನಲ್ಲಿ ಹಿಂದಕ್ಕೆ ಓಡೋಡಿ ಬಂದೆವು. ಈ 'ಬ್ರೇಕಿಂಗ್ ನ್ಯೂಸ್' ಎಲ್ಲರಿಗೂ ಹಂಚುವ ಉತ್ಸಾಹ ನಮ್ಮಲ್ಲಿ ಹೆಚ್ಚಾಗಿತ್ತು. ಆಗ ಮೊದಲಿಗೆ ಗೇಟಿನ ಬಳಿ ಸಿಕ್ಕವರು ಗಣೇಶಗುಡಿಯ ಮ್ಯಾನೇಜರ್ ಮೋಹನ ಬಾಬು. ತೇಕುತ್ತಲೇ ಅವರಿಗೆ ವಿಷಯ ಹೇಳಿದೆವು. ತಕ್ಷಣ ಅವರಿಂದ ಶಹಬ್ಬಾಸ್ ಗಿರಿ ಸಿಗಬಹುದೆಂದು ನಿರೀಕ್ಷಿಸಿದೆವು. ಬದಲಿಯಾಗಿ ರೇಗಿದ ಅವರು 'ಇಷ್ಟು ಬೆಳಗ್ಗೆ ಏಕೆ ನೀವೇ ಹೋದಿರಿ? ನಮ್ಮವರ ಜೊತೆಯಿಲ್ಲದೆ ಯಾಕೆ ಗೇಟು ದಾಟಿದಿರಿ?' ಎಂದು ಗದರಿದರು. ಅವರು ಸಂತೋಷಪಡುತ್ತಾರೆಂದು ನಾವು ಭಾವಿಸಿದ್ದರೆ ಅವರು ಸಿಕ್ಕಾಪಟ್ಟೆ ಗರಂ ಆಗಿದ್ದರು. 'ನಾವು ಹೆದರಿ ಬರಲಿಲ್ಲ ಫೋಟೊ ತೆಗೆದು ಅವು ಹೊರಟು ಹೋದ ಮೇಲೆ ಬಂದೆವು' ಎಂದು ಸಮಜಾಯಿಷಿ ಹೇಳಿ ಸಂತೈಸಲು ನೋಡಿದೆವು. ಹೈರಾಣಾಗಿದ್ದ ಅವರು, ನಿಮ್ಮಿಬ್ಬರನ್ನು ಚಿರತೆಗಳು ಕೊಂದು ಹಾಕಿದ್ದರೆ ನನ್ನ ಗತಿ ಏನೆಂದು ಕೂಗಾಡುತ್ತಲೇ ಇದ್ದರು.

ಅವರ ಆತಂಕ ಕಡಿಮೆ ಮಾಡಲು ನಾವು ತೆಗೆದ